"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡ

# ಕರ್ನಾಟಕ ವಿಧಾನ ಪರಿಷತ್ತು

2ನೇ ಜುಲೈ 2018
ಸೋಮವಾರ

## ವಿಷಯಾನುಕ್ರಮಣಿಕೆ

1. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿ ಮಂಡನೆ

2. **ಪ್ರಕಟಣೆಗಳು**

3. **ಸಂತಾಪ ಸೂಚನೆ**

ವಿಧಾನ ಸಭೆಯ ಹಾಲಿ ಸದಸ್ಯರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಕೇಂದ್ರ ಸಚಿವರಾಗಿದ್ದ ನ್ಯಾಮಗೌಡ ಸಿದ್ದು ಭೀಮಪ್ಪ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಕೆ.ಹೆಚ್.ಹನುಮೇಗೌಡ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಸಯದ್ ಮುಧೀರ್ ಆಗಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರು, ಮಾಜಿ ಮುಖ್ಯ ಸಚೇತಕರಾಗಿದ್ದ ಶ್ರೀ ಟಿ.ಹೆಚ್.ನಾರಾಯಣಸ್ವಾಮಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಮಹದೇವಪ್ಪ ಶಿವಬಸಪ್ಪ ಪಟ್ಟಣ ಅವರುಗಳ ನಿಧನದ ಬಗ್ಗೆ.

– ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡ

(001)02.07.2018 1.40 ಕೆಜಿ.ವಿಕೆ

***ಕರ್ನಾಟಕ ವಿಧಾನ ಪರಿಷತ್ತು***

***ಸೋಮವಾರ, 2ನೇ ಜುಲೈ 2018***

***ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ***

***ಮಧ್ಯಾಹ್ನ  01 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.***

***ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು***

***ಪೀಠದಲ್ಲಿ ಉಪಸ್ಥಿತರಿದ್ದರು.***

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನವು 'ವಂದೇ ಮಾತರಂ' ಗೀತೆಯೊಂದಿಗೆ ಪ್ರಾರಂಭವಾಯಿತು)**

1. **ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:-** ಮಾನ್ಯ ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಕನ್ನಡ, ಆಂಗ್ಲ ಮತ್ತು ಹಿಂದಿ ಪ್ರತಿಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಈಗ ಪ್ರಕಟಣೆಗಳು.

2. **ಪ್ರಕಟಣೆಗಳು**:-

**ಅ)** ಸನ್ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 02.07.2018 ರಂದು ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(1)ರ ಪ್ರಕಾರ **ಡಾ:ಜಯಮಾಲ ರಾಮಚಂದ್ರ**, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ದಿನಾಂಕ 02.07.2018 ರಿಂದ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಿರುತ್ತಾರೆಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

ಮಾನ್ಯ ಡಾ:ಜಯಮಾಲ ರಾಮಚಂದ್ರರವರು ಸಭಾನಾಯಕರ ಸ್ಥಾನವನ್ನು ಅಲಂಕರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಡಾ:ಜಯಮಾಲ ರಾಮಚಂದ್ರ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಸಭಾನಾಯಕರ ಸ್ಥಾನವನ್ನು ಅಲಂಕರಿಸಿದರು)

**ಆ)** ಕರ್ನಾಟಕ ರಾಜ್ಯ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ ದಿನಾಂಕ: 30.06.2018ರ ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 2(2)ರ ಪ್ರಕಾರ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ದಿನಾಂಕ: 02.07.2018 ರಿಂದ ಜಾರಿಗೆ ಬರುವಂತೆ ಮಾನ್ಯತೆ ನೀಡಲಾಗಿದೆ.

ಮಾನ್ಯ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಅಲಂಕರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಅಲಂಕರಿಸಿದರು)

**ಇ)** ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ 2009ರ ಪ್ರಕರಣ 3 (ಸಿಸಿಸಿ) ರ ರೀತ್ಯಾ ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರನ್ನು** ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ಹೆಸರಿಸಿರುತ್ತಾರೆ. ಆದುದರಿಂದ, ದಿನಾಂಕ: 02.07.2018 ರಿಂದ ಜಾರಿ ಬರುವಂತೆ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

ಮಾನ್ಯ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ವಿರೋಧ ಪಕ್ಷದ ಮುಖ್ಯ ಸಚೇತಕರ ಸ್ಥಾನವನ್ನು ಅಲಂಕರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ವಿರೋಧ ಪಕ್ಷದ ಮುಖ್ಯ ಸಚೇತಕರ ಸ್ಥಾನವನ್ನು ಅಲಂಕರಿಸಿದರು)

**ಈ)** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

1. **ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**
2. **ಶ್ರೀ ಕೆ.ಸಿ.ಕೊಂಡಯ್ಯ**
3. **ಶ್ರೀ ಕೆ.ಬಿ.ಶಾಣಪ್ಪ**
4. **ಶ್ರೀ ಮರಿತಿಬ್ಬೇಗೌಡ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ಅತ್ಯಂತ ವಿನಂತಿಯಿಂದ ತರಬಯಸುತ್ತೇನೆ. ಸಾಮಾನ್ಯವಾಗಿ, ಈ ಸದನಕ್ಕೆ ಮೇಲ್ಮನೆ ಎನ್ನುವಂತಹ ಗೌರವ ಘನತೆಗಳು ಪರಂಪರೆಯಾಗಿ ಬಂದಿರುತ್ತದೆ. ಆದರೆ, ಮೊನ್ನೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟಂತೆ ಹೊರಡಿಸಿರುವ ಪ್ರಕಟಣೆಯ ಭಾಗ-2 ರ ಬಗ್ಗೆ ಅನೇಕ ನನ್ನ ಗೆಳೆಯರು ಮತ್ತು ಶಾಸಕರು ನನ್ನ ಬಳಿ ಮಾತನಾಡುವಾಗ ಮಾನ್ಯ ಸಭಾಪತಿಯವರ ಬಗ್ಗೆ ಉಲ್ಲೇಖನಗಳು ಈ ಪ್ರಕಟಣೆಗಳಲ್ಲಿ ಮೊದಲು ಬರಬೇಕಾಗಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಅನೇಕ ಪ್ರಕಟಣೆಗಳಲ್ಲಿ ಮಾನ್ಯ ಸಭಾಪತಿಯ ಹುದ್ದೆಯನ್ನು ನಂತರ ಹಾಕಿರುವಂತಹ ವಿದ್ಯಮಾನಗಳು ನಡೆದಿರುತ್ತವೆ. ಈ ಮೇಲ್ಮನೆಗೆ ಶಾಸನಬದ್ಧವಾದಂತಹ ಗೌರವಯುತವಾದ ಹಿನ್ನೆಲೆ ಇರುವುದರಿಂದ ಈ ಪ್ರಮಾದವನ್ನು ಸರಿಪಡಿಸಬೇಕೆಂದು ಮತ್ತು ಸಭಾಪತಿಯವರ ಹುದ್ದೆಯನ್ನು ಪ್ರಕಟಣೆಯಲ್ಲಿ ಮೊದಲು ಹಾಕುವಂತೆ ತಾವು ಸರಿಪಡಿಸಬೇಕೆಂದು ನನ್ನ ಮೊದಲ ವಿನಂತಿ. ಅನೇಕ ಜನ ಹಿರಿಯರು ಮತ್ತು ಈ ಸದನದ ಸದಸ್ಯರು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ, ದಯವಿಟ್ಟು ತಾವು ಇದರ ಬಗ್ಗೆ ಗಮನ ಹರಿಸಬೇಕೆಂದು ನನ್ನ ವಿನಂತಿ.

**ಸಭಾಪತಿಯವರು**:- ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಷಯವನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಮಾನ್ಯ ಮುಖ್ಯ ಸಚೇತಕರಿಗೆ ಈ ಸಂದರ್ಭದಲ್ಲಿ ಶುಭವನ್ನು ಕೋರುತ್ತೇನೆ. ಈಗ ತಾವುಗಳು ಏನಾದರೂ ಮಾತನಾಡುವುದಿದ್ದರೆ, ಮಾತನಾಡಬಹುದು.

(002)02.07.2018 1.50 ಎಂವಿ:ವಿಕೆ

**3. ಸಂತಾಪ ಸೂಚನೆ**

**ವಿಷಯ**: ವಿಧಾನ ಸಭೆಯ ಹಾಲಿ ಸದಸ್ಯರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಕೇಂದ್ರ ಸಚಿವರಾಗಿದ್ದ ಶ್ರೀ ನ್ಯಾಮಗೌಡ ಸಿದ್ದು ಭೀಮಪ್ಪ; ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಕೆ.ಹೆಚ್.ಹನುಮೇಗೌಡ; ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಸಯದ್ ಮುಧೀರ್ ಆಗಾ; ವಿಧಾನ ಪರಿಷತ್ತಿನ ಮಾಜಿ ಸದಸ್ಯರು, ಮಾಜಿ ಮುಖ್ಯ ಸಚೇತಕರಾಗಿದ್ದ ಶ್ರೀ ಟಿ.ಹೆಚ್. ನಾರಾಯಣಸ್ವಾಮಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಮಹಾದೇವಪ್ಪ ಶಿವಬಸಪ್ಪ ಪಟ್ಟಣ ಅವರುಗಳ ನಿಧನದ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-**

**01. ನ್ಯಾಮಗೌಡ ಸಿದ್ದು ಭೀಮಪ್ಪ.**

ವಿಧಾನ ಸಭೆಯ ಹಾಲಿ ಸದಸ್ಯರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು, ಲೋಕಸಭೆಯ ಮಾಜಿ ಸದಸ್ಯರು ಹಾಗೂ ಕೇಂದ್ರ ಸಚಿವರಾಗಿದ್ದ ಶ್ರೀ ನ್ಯಾಮಗೌಡ ಸಿದ್ದು ಭೀಮಪ್ಪ ಅವರು ದಿನಾಂಕ:28-05-2018ರಂದು ಅಕಾಲಿಕ ಮರಣ ಹೊಂದಿರುತ್ತಾರೆ.

05ನೇ ಆಗಸ್ಟ್, 1949ರಂದು ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀಯುತರು ಜಮಖಂಡಿ ಸಕ್ಕರೆ ಕಾರ್ಖಾನೆ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಹಾಗೂ ಕೃಷ್ಣ ಬ್ಯಾಂಕ್ ಫಾರ್ಮರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿಯಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಿಶೇಷ ಪ್ರತಿನಿಧಿಯಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ರೈತಾಪಿ ವರ್ಗದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಶ್ರೀಯುತರು ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ಕೃಷ್ಣ ನದಿಗೆ ಚಿಕ್ಕಪಡಸಲಗಿ ಬಳಿ ಖಾಸಗಿ ಬ್ಯಾರೇಜ್ ಅನ್ನು ನಿರ್ಮಿಸಿದ ಕೀರ್ತಿಗೆ ಭಾಜನರಾಗಿರುತ್ತಾರೆ.

2004-2010ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಹಾಲಿ 15ನೇ ವಿಧಾನ ಸಭೆಯ ಸದಸ್ಯರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಒಬ್ಬ ಹಿರಿಯ, ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**02. ಕೆ.ಹೆಚ್. ಹನುಮೇಗೌಡ**

ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಕೆ.ಹೆಚ್.ಹನುಮೇಗೌಡ ಅವರು ದಿನಾಂಕ:13.05.2018 ರಂದು ನಿಧನ ಹೊಂದಿರುತ್ತಾರೆ.

ಹಾಸನ ತಾಲ್ಲೂಕಿನ ಕಣಿವೆ ಬ್ಯಾಡರಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಬಿ.ಎಲ್., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರು ಹಾಸನದ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ಐದನೇ, ಆರನೇ, ಒಂಭತ್ತನೇ ಹಾಗೂ ಹನ್ನೊಂದನೇ ವಿಧಾನಸಭೆಗೆ ಹಾಸನ ಕ್ಷೇತ್ರದಿಂದ ಚುನಾಯಿತರಾಗಿದ್ದರಲ್ಲದೆ, 1994ರಲ್ಲಿ ಶ್ರೀ ವೀರಪ್ಪಮೊಯ್ಲಿ ಅವರ ಸಂಪುಟದಲ್ಲಿ ಸಚಿವರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ, ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**03. ಸಯದ್ ಮುಧೀರ್ ಆಗಾ.**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಸಯದ್ ಮುಧೀರ್ ಆಗಾ ಅವರು ದಿನಾಂಕ:09.06.2018ರಂದು ನಿಧನ ಹೊಂದಿರುತ್ತಾರೆ.

22ನೇ ಅಕ್ಟೋಬರ್, 1949ರಂದು ರಾಮನಗರದಲ್ಲಿ ಜನಿಸಿದ್ದ ಶ್ರೀಯುತರು ಐ.ಟಿ.ಐ., ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ್ದು, ವೃತ್ತಿಯಲ್ಲಿ ಉದ್ಯಮಿಯಾಗಿರುತ್ತಾರೆ.

ಶ್ರೀಯುತರು ರೈಲ್ವೆ ನೇಮಕಾತಿ ಮಂಡಳಿಯ ಅಧ್ಯಕ್ಷರಾಗಿ, ರಾಜ್ಯ ವಕ್ಫ್ ಬೋರ್ಡ್ ಮತ್ತು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ, ರಾಮನಗರದ ಅಂಜುಮಾನ್ ಇಮಾಯತುಲ್ ಇಸ್ಲಾಮ್ ಶಿಕ್ಷಣ ಸಂಸ್ಥೆ ಮತ್ತು ರಾಮನಗರದ ಯೂತ್ ಎಜುಕೇಷನ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

2012-2018ರ ಅವಧಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**04. ಟಿ.ಹೆಚ್. ನಾರಾಯಣಸ್ವಾಮಿ**

ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಮಾಜಿ ಮುಖ್ಯ ಸಚೇತಕರಾಗಿದ್ದ ಶ್ರೀ ಟಿ.ಹೆಚ್. ನಾರಾಯಣಸ್ವಾಮಿ ಅವರು ದಿನಾಂಕ:11.06.2018ರಂದು ನಿಧನ ಹೊಂದಿರುತ್ತಾರೆ.

11ನೇ ಅಕ್ಟೋಬರ್, 1946ರಂದು ತುಮಕೂರಿನಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎಸ್.ಎಲ್.ಸಿ.ವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಜಿಲ್ಲಾ ಕಾಳಿದಾಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾವರ್ಧಕ ಸಂಘ ಹಾಗೂ ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು 1988ರಲ್ಲಿ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದು, 1990ರಲ್ಲಿ ವಿಧಾನ ಪರಿಷತ್ತಿನ ಮುಖ್ಯ ಸಚೇತಕರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ, ಸರಳ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**೦5. <u>ಡಾ. ಮಹಾದೇವಪ್ಪ ಶಿವಬಸಪ್ಪ ಪಟ್ಟಣ</u>**

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಮಹಾದೇವಪ್ಪ ಶಿವಬಸಪ್ಪ ಪಟ್ಟಣ ಅವರು ದಿನಾಂಕ:23.03.2018ರಂದು ನಿಧನ ಹೊಂದಿರುತ್ತಾರೆ.

ಶ್ರೀಯುತರು ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ತಮ್ಮೆಲ್ಲಾ ಆಸ್ತಿ ಮತ್ತು ಸಂಪತ್ತನ್ನು ಸ್ವಾತಂತ್ರ್ಯ ಹೋರಾಟಕ್ಕಾಗಿ ಮುಡುಪಿಟ್ಟರು. 1930ರಲ್ಲಿ ರಾಮದುರ್ಗದಲ್ಲಿ ಕರ ನಿರಾಕರಣೆ ಹೋರಾಟದ ಬಳಕ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿದ್ದ ಇವರಿಗೆ ಕಂಡಲ್ಲಿ ಗುಂಡಿಕ್ಕುವ ಆದೇಶ ಹೊರಡಿಸಿದ್ದರು. ನಂತರ ಶ್ರೀಯುತರು ಬಳ್ಳಾರಿಗೆ ತೆರಳಿ ಸದಾಶಿವ ಶೆಟ್ಟಿ ಎಂಬ ಹೆಸರಿನಲ್ಲಿ ಬಟ್ಟೆ ವ್ಯಾಪಾರಿಯಾಗಿ ಮಾರುವೇಷದಲ್ಲಿ ಹೋರಾಟ ನಡೆಸಿದ್ದರು.

ಶ್ರೀಯುತರು ರಾಮದುರ್ಗ ಜಿಲ್ಲೆಯ ಪ್ರಜಾಸಂಘದ ಹಾಗೂ ಬಳ್ಳಾರಿಯ ಕರ್ನಾಟಕ ಸಂಘದ ಸಂಸ್ಥಾಪಕರಾಗಿದ್ದರಲ್ಲದೆ, ಬಳ್ಳಾರಿಯ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಹಾಗೂ ಲೋಕಸೇವಾ ಸಂಘದ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಬಳ್ಳಾರಿ ಜಿಲ್ಲೆಯನ್ನು ರಾಜ್ಯಕ್ಕೆ ಸೇರ್ಪಡಿಸುವ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು. 1957ರಲ್ಲಿ ರಾಮದುರ್ಗ ವಿಧಾನಸಭೆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಸಿದ್ದು ನ್ಯಾಮಗೌಡರು ‘ಬ್ಯಾರೇಜ್ ನ್ಯಾಮಗೌಡರು’ ಎನ್ನುವಂತಹ ಒಂದು ಪ್ರಖ್ಯಾತಿಯನ್ನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪಡೆದುಕೊಂಡಿದ್ದರು. ಇವರು ಒಬ್ಬ ಶ್ರೇಷ್ಠ ಜನನಾಯಕರಾಗಿದ್ದರು. ತನ್ನನ್ನು ನಂಬಿಕೊಂಡಿದ್ದಂತಹ ಜಿಲ್ಲೆಗೆ ಕುಡಿಯುವುದಕ್ಕೆ ಹಾಗೂ ಕೃಷಿಗೆ ನೀರು ಇಲ್ಲವೆಂದು, ನೀರಿಗಾಗಿ ಹಾಹಾಕಾರ ಎದ್ದಾಗ, ಸರ್ಕಾರದ ಅನುದಾನಕ್ಕೂ ಕೂಡ ಕಾಯದೆ, ಎಲ್ಲರನ್ನೂ ಒಟ್ಟುಗೂಡಿಸಿ, ಗುದ್ದಲಿಯನ್ನು ತೆಗೆದುಕೊಂಡು ತಾವೇ ನಿಂತು, ಇವತ್ತು ಒಂದು ಬ್ಯಾರೇಜ್ ಅನ್ನು ಕಟ್ಟುವುದು ಎಂದರೆ, ಬಹುಶಃ ಈ ಎಲ್ಲಾ ಸಚಿವರಿಗೂ ಮತ್ತು ಶಾಸಕರಿಗೂ ಕೂಡ ಅವರು ಒಬ್ಬ ಮಾದರಿ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಇವತ್ತಿನ ದಿವಸ ಅಂತಹ ನಾಯಕರ ಅಕಾಲಿಕವಾದಂತಹ ಮರಣ, ಮಾನವೀಯ ಮೌಲ್ಯವನ್ನು ಉಳ್ಳಂತಹ ಶಾಸಕರಿಗೆ ಅವರ ನಿಧನದಿಂದ ಒಬ್ಬ ಸಜ್ಜನಿಕೆಯ ರಾಜಕಾರಣಿಯನ್ನು ನಾವು ಕಳೆದುಕೊಂಡಂತಾಗಿದೆ.

ಮಾನ್ಯ ಸಭಾಪತಿಯವರೇ, ಶ್ರೀ ಕೆ.ಹೆಚ್.ಹನುಮೇಗೌಡರು, ಶ್ರೀಯುತರು ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ನಿಧನದಿಂದ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಮಾನ್ಯ ಸಭಾಪತಿಯವರೇ, ಶ್ರೀ ಸಯದ್ ಮುಧೀರ್ ಆಗಾ ರವರು ರಾಮನಗರ ಜಿಲ್ಲೆಯಲ್ಲಿ ಜನಿಸಿದ್ದು, ಇವರು ನಾನು ಕಂಡಂತೆ ಅತ್ಯಂತ ಶಾಂತ ಸ್ವಭಾವದವರಾಗಿದ್ದರು, ನಾನು ಕಳೆದ ನಾಲ್ಕು ವರ್ಷಗಳಲ್ಲಿ ಕಂಡಂತೆ, ಅವರು ಯಾವಾಗಲೂ ಕೂಡ ಸದನದಲ್ಲಿ ಕುಳಿತುಕೊಳ್ಳುತ್ತಿದ್ದರು. ಬೆಳಗ್ಗೆ ಬಂದಾಗ ಸಂಜೆಯವರೆವಿಗೂ ಸದನದ ಕಾರ್ಯಕಲಾಪಗಳಲ್ಲಿ ತೊಡಗಿಕೊಂಡಿರುವುದನ್ನು ನಾನು ನೋಡಿದ್ದೇನೆ. ಅವರು ಮೊಗಸಾಲೆಯಲ್ಲಿ ಕುಳಿತಿದ್ದಾಗಲೂ ಸಹ ಅತ್ಯಂತ ಸರಳ ಸಜ್ಜನಿಕೆಯಿಂದ ವ್ಯವಹರಿಸಿದ್ದನ್ನು ನಾನು ನೋಡಿದ್ದೇನೆ. ಈ ರೀತಿ ಸಕ್ರಿಯವಾಗಿ ಭಾಗವಹಿಸುವಂತಹ ಒಬ್ಬ ಸದಸ್ಯರನ್ನು ನಾವು ಕಳೆದುಕೊಂಡಿದ್ದೇವೆ. ಇವರ ನಿಧನದಿಂದ ಒಬ್ಬ ಹಿರಿಯ ಮುತ್ಸದಿಯನ್ನು ಈ ರಾಜ್ಯ ಕಳೆದುಕೊಂಡಿದೆ.

ಮಾನ್ಯ ಸಭಾಪತಿಯವರೇ, ಶ್ರೀ ಟಿ.ಹೆಚ್.ನಾರಾಯಣಸ್ವಾಮಿಯವರು ನೇರ ಮತ್ತು ನಿಷ್ಠೂರ ರಾಜಕಾರಣಿಯಾಗಿದ್ದರು, ಇವರು ವಿಧಾನ ಪರಿಷತ್ತಿನ ಮುಖ್ಯಸಚೇತಕರಾಗಿಯೂ ಕೂಡ ಕಾರ್ಯನಿರ್ವಹಿಸಿದ್ದಾರೆ, ಇವರು ಮುಖ್ಯಸಚೇತಕರಾಗಿ ಕಾರ್ಯನಿರ್ವಹಿಸುವಾಗ, ಅತ್ಯಂತ ಯಶ್ವಸಿಯಾಗಿ ಒಳ್ಳೆಯ ಕೆಲಸವನ್ನು ನಿರ್ವಹಿಸಿದ್ದಾರೆ. ಇವರ ನಿಧನದಿಂದ ಒಬ್ಬ ಹಿರಿಯ ಧುರೀಣರನ್ನು ನಾವು ಕಳೆದುಕೊಂಡಂತಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಸಭಾಪತಿಯವರೇ, ಡಾ.ಮಹಾದೇವಪ್ಪ ಶಿವಬಸಪ್ಪ ಪಟ್ಟಣನವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಮುತ್ಸದಿಗಳು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಒಂದು ವಿಭಿನ್ನ ಎಂದರೆ, ದಂಪತಿಗಳು ಇಬ್ಬರು ಕೂಡ ಶಾಸಕರಾಗಿದ್ದರು. ಶ್ರೀಮತಿ ಶಾರದ ಪಟ್ಟಣನವರು ಕೂಡ ಅತ್ಯಂತ ಒಳ್ಳೆಯ ಸೇವೆಯನ್ನು ಮಾಡಿದ್ದಾರೆ. ಪತಿ-ಪತ್ನಿ ಇಬ್ಬರಿಗೂ ದೊರಕುವ ಅವಕಾಶಗಳು ಬಹಳ ಕಡಿಮೆ. ಆದರೆ, ಇಬ್ಬರು ಕೂಡ ಇಲ್ಲಿ ದುಡಿದಿದ್ದಾರೆ ಎಂಬುವುದನ್ನು ಇಲ್ಲಿ ನೆನಪಿಸಿಕೊಳ್ಳುತ್ತಾ, ಬಳ್ಳಾರಿ ಜಿಲ್ಲೆಯನ್ನು ರಾಜ್ಯಕ್ಕೆ ಸೇರಿಸುವಲ್ಲಿ ಇವರು ನಿರ್ಣಾಯಕ ಪಾತ್ರವನ್ನು ನಿರ್ವಹಿಸಿರುತ್ತಾರೆ. ಅವರ ನಿರಂತರ ಹೋರಾಟ ಮತ್ತು ಮೌಲ್ಯಧಾರಿತವಾದಂತಹ ರಾಜಕಾರಣ ಹಾಗೂ ಅವರು ಬದುಕಿದಂತಹ ಸಂದರ್ಭದಲ್ಲಿ ಅಪ್ರತಿಮವಾದಂತಹ ಮತ್ತು ಅಪ್ಪಟವಾದಂತಹ ಗಾಂಧಿವಾದಿಗಳಾಗಿದ್ದರು. ಒಂದು ರೀತಿಯಲ್ಲಿ ಹೋರಾಟಗಾರರು ತಮ್ಮ ಮನೆ-ಮಠಗಳೆಲ್ಲವನ್ನೂ ಕೂಡ ಮೀಸಲಾಗಿಡುವುದು ಎಂದರೆ, ನಮಗೆ ಅವರ ಬದುಕಿನ ಮೌಲ್ಯವನ್ನು ತೋರಿಸಿಕೊಡುತ್ತದೆ.

ಮಾನ್ಯ ಸಭಾಪತಿಯವರೇ, ಈ ಎಲ್ಲಾ ಗಣ್ಯಮಾನ್ಯರಿಗೆ ಮಾನ್ಯ ಸಭಾಪತಿಯವರು ಮಂಡಿಸಿರುವಂತಹ ಈ ಸಂತಾಪ ಸೂಚಕದ ಈ ನಿರ್ಣಯಕ್ಕೆ ನನ್ನ ಸಹಮತಿಯನ್ನು ಸೂಚಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಈ ಸಂತಾಪ ಸೂಚನೆಯನ್ನು ಯಾವ ರೀತಿ ಮಂಡಿಸಿದ್ದೀರಿ, ಮಾನ್ಯ ನ್ಯಾಮಗೌಡ ಸಿದ್ದು ಭೀಮಪ್ಪನವರು, ಬೇರೆ-ಬೇರೆ ಹಾಗೂ ರಾಜಕೀಯಕ್ಕೆ ಸೇರಿದಂತೆ ಅವರು ನಮಗೆಲ್ಲಾ ಪರಿಚಿತರು. ಅವರು ಮಾಡಿರುವಂತಹ ಸಾಧನೆ ಮತ್ತು ಶ್ರಮ ಅಂದರೆ, ನಾವುಗಳೆಲ್ಲರೂ ಸ್ವಲ್ಪ ರಾಜಕಾರಣಕ್ಕೆ ಸಕ್ರಿಯವಾಗುವುದಕ್ಕಿಂತ ಮುಂಚೆ ಅವರನ್ನು ಬ್ಯಾರೇಜ್ ಸಿದ್ದು ಎಂದು ಕರೆದಿರುವುದನ್ನು ನಾವುಗಳೆಲ್ಲರೂ ಪತ್ರಿಕೆಗಳಲ್ಲಿ ಓದಿರುವಂತಹ ಒಂದು ನೆನಪು. ಮೊನ್ನೆಯ ದಿವಸ ಅವರಿಗೆ ಅಪಘಾತವಾದಾಗ ನಾವುಗಳೆಲ್ಲರೂ ತುಂಬಾ ಸಂಕಟಪಟ್ಟಿದ್ದೇವೆ. ಒಬ್ಬ ಶ್ರೇಷ್ಠ ರಾಜಕಾರಣಿಯನ್ನು ಮತ್ತು ಜನಪ್ರತಿನಿಧಿಯನ್ನು ಕಳೆದುಕೊಂಡಿರುವಂತಹ ನೋವು ನಮಗಿದೆ. ಅವರ ಸಾವಿನ ನೋವಿಗೆ ನಾವೆಲ್ಲರೂ ನಿಮ್ಮ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇವೆ.

ಮಾನ್ಯ ಸಭಾಪತಿಯವರೇ, ಇನ್ನು ಮಾನ್ಯ ಕೆ.ಹೆಚ್.ಹನುಮೇಗೌಡರ ಬಗ್ಗೆ ಹೇಳುವುದಾದರೆ, ಅವರು ಸಚಿವರಾಗಿದ್ದವರು ಮತ್ತು ವಿಧಾನಸಭೆಯ ಸದಸ್ಯರಾಗಿದ್ದರು. ಅವರು ಹಾಸನ ತಾಲ್ಲೂಕಿನಲ್ಲಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕೆಲಸಗಳನ್ನು ಮಾಡಿದವರು. ಅವರು ಒಬ್ಬ ಹಿರಿಯ ಸಜ್ಜನರು ಎಂಬುದು ತಮಗೆಲ್ಲಾ ಅರ್ಥವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ಸಯದ್ ಮುಧೀರ್ ಆಗಾರವರು ನಮ್ಮ ಜೊತೆಯಲ್ಲಿ ಈಗಲೂ ಕೂಡ ಅವರು ಇಲ್ಲಿ ಎಲ್ಲೋ ಕುಳಿತುಕೊಂಡಿದ್ದಾರೆ ಎಂದು ಅನಿಸುತ್ತದೆ. ಅವರು ಬಹಳ ಹಿರಿಯರು ಹಾಗೂ ಎಲ್ಲರನ್ನೂ ಕೂಡ ಬಹಳ ಪ್ರೀತಿಯಿಂದ ಮತ್ತು ಗೌರವದಿಂದ ನೋಡಿದಂತಹ ಒಬ್ಬ ಹಿರಿಯರು.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾನ್ಯ ಟಿ.ಹೆಚ್.ನಾರಾಯಣಸ್ವಾಮಿ ಯವರ ಬಗ್ಗೆ ತಾವು ಸೂಚನೆಯನ್ನು ಮಂಡಿಸಿದ್ದೀರಿ. ಅವರು ವಿಧಾನ ಪರಿಷತ್ತಿನ ಸದಸ್ಯರು ಹಾಗು ಮುಖ್ಯ ಸಚೇತಕರಾಗಿ ಕೆಲಸವನ್ನು ಮಾಡಿದ್ದಾರೆ. ಅವರು ಬಹಳ ಸರಳ ಮತ್ತು ಸಜ್ಜನರು ಎನ್ನುವಂತಹ ಗೌರವಕ್ಕೆ ಪಾತ್ರರಾದವರು.

**(003) 02.07.2018 2.00 ವೈಎಲ್-ಬಿಎನ್ಎಸ್**

ಮಾನ್ಯ ಸಭಾಪತಿಯವರೆ, ಡಾ॥ ಮಹಾದೇವಪ್ಪ ಶಿವಬಸಪ್ಪ ಪಟ್ಟಣರವರ ಬಗ್ಗೆ ತಮ್ಮ ಉಲ್ಲೇಖವನ್ನು ಗಮನಿಸಬೇಕಾಗುತ್ತದೆ. ಶ್ರೀಯುತರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರ ಹೋರಾಟ ಎಲ್ಲಿಯವರೆಗೂ ಸಕ್ರಿಯತೆ ಇತ್ತೆಂದರೆ, ಕರ ನಿರಾಕರಣೆ ಹೋರಾಟ ಮಾಡುವಂತಹ ಸಂದರ್ಭದಲ್ಲಿ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿ ಅವರನ್ನು ಕಂಡಲ್ಲಿ ಗುಂಡು ಹಾರಿಸಬೇಕೆಂದು ಬ್ರಿಟಿಷ್ ಸರ್ಕಾರ ಆದೇಶ ಹೊರಡಿಸಲಾಗಿತ್ತು. ಮಾರುವೇಷದಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಶ್ರೀಯುತರು ಬ್ರಿಟಿಷರಿಗೆ ಒಂದು ರೀತಿಯ ಸಿಂಹಸ್ವಪ್ನರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ವಿಧಾನಸಭೆಯ ಹಿರಿಯ ಸದಸ್ಯರಾಗಿದ್ದ ಅವರ ಕಣ್ಮರೆ ಇಂದಿನ ಕಾಲದಲ್ಲಿ ಸಮಾಜಕ್ಕೆ ಮತ್ತು ವ್ಯವಸ್ಥೆಗೆ ಬಹಳ ದೊಡ್ಡ ನಷ್ಟವಾಗಿದೆ.

ತಾವು ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸಿ, ನಿಧನ ಹೊಂದಿರುವಂತಹ ಎಲ್ಲರ ಆತ್ಮಕ್ಕೆ ಚಿರಶಾಂತಿಯನ್ನು ಪರಮಾತ್ಮ ಕರುಣಿಸಲಿ ಎಂದು ಹೇಳಿ ಪ್ರಾರ್ಥಿಸುತ್ತೇನೆ.

**ಸಭಾಪತಿಯವರು**:- ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರುಗಳ ಕುಟುಂಬ ವರ್ಗಕ್ಕೆ ಪರಮಾತ್ಮನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಹಾಜರಿದ್ದ ಮಾನ್ಯ ಸದಸ್ಯರೆಲ್ಲರೂ ಮೃತರಿಗೆ ಗೌರವ ಸೂಚಿಸಲು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗಕ್ಕೆ ಕಳುಹಿಸಲಾಗುವುದು.

ಈಗ ಸದನವನ್ನು ದಿನಾಂಕ 03.07.2018 ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 3ನೇ ಜುಲೈ ಮಾಹೆ 2018ರ ಮಂಗಳವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"